858 (611) ಶ್ರೀ ಪಾಟೀಲ್ ಎಸ್.ಎಸ್. (ಮುಂಡರಗಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಂಡರಗಿ ಮತದಾರ ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯತ್‌ಗೆ ಸೇರಿದ ರಸ್ತೆಗಳ ಅಳತೆ ಮಾಪನವನ್ನು ಕಡಿಮೆ ಕಳುಹಿಸಿರುವುದು ನಿಜವಲ್ಲವೆ;

ಆ) ಹಾಗಿದ್ದಲ್ಲಿ, ಇದನ್ನು ಸರಿಪಡಿಸಿ ಕಿಲೋ ಮೀಟರ್‌ಗೆ ತಕ್ಕಂತೆ ತಗಲುವ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಸಿ. ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಹೌದು

ಆ) 12ನೇ ಹಣಕಾಸು ಯೋಜನೆಯಡಿ ರಸ್ತೆ ನಿರ್ವಹಣೆ ಅನುದಾನವನ್ನು ರಸ್ತೆಗಳ ಉದ್ದಳತೆ ಮತ್ತು ವೈಟೇಜ್ ಆಧಾರದ ಮೇಲೆ ಹಂಚಿಕೆ ಮಾಡಲಾಗಿದೆ. ಈಗಾಗಲೇ 2006–07ನೇ ಸಾಲಿಗೆ ಹಂಚಿಕೆಯು ಮಾಡಲಾಗಿದ್ದು, ಬದಲಾಯಿತ ರಸ್ತೆ ಉದ್ದಳತೆಯನ್ನು ಮುಂದಿನ ವರ್ಷದ ಅನುದಾನ ಹಂಚಿಕೆಗೆ ಪರಿಗಣಿಸಲಾಗುತ್ತದೆ.

859 (1031) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳ್ತಂಗಡಿಯಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಮಂಜೂರಾದ ಜಮೀನಿನ ಸರ್ವೇ ನಂಬರ್ ಮತ್ತು ಅದರ ವಿಸ್ತೀರ್ಣದ ವಿವರಗಳೇನು;

ಆ) ಈ ಜಮೀನಿನಲ್ಲಿ ಅತಿಕ್ರಮಣವಾದ ಬಗ್ಗೆ ಸರ್ಕಾರದಲ್ಲಿರುವ ವಿವರಗಳೇನು;

ಇ) ಅತಿಕ್ರಮವಾಗಿದ್ದಲ್ಲಿ, ಅದರ ತೆರವಿಗೆ ಸರ್ಕಾರದ ಕ್ರಮಗಳೇನು;

ಈ) ಈ ಕಾಲೇಜಿಗೆ ಜಮೀನಿಗೆ ಆವರಣಗೋಡೆ ಕಟ್ಟುವ ಕುರಿತಾದ ವಿವರಗಳೇನು;

ಉ) ಈ ಕಾಲೇಜಿಗೆ ಮಂಜೂರಾಗಿರುವ ಬೋಧಕ ಮತ್ತು ಬೋಧಕೇತರ ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳೇನು;

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು):

ಅ) ಗೇಣಿ ಮತ್ತು ಪಹಣಿಪಟ್ಟಿಯ ಪ್ರಕಾರ ಸರ್ವೆ ನಂಬರ್ 109/2ರಲ್ಲಿ 5.92 ಎಕರೆ ಸರ್ವೆ ನಂಬರ್ 107/1 ಎರಲ್ಲಿ 4.05 ಎಕರೆ ಒಟ್ಟು 9.97 ಎಕರೆ

ಆ) ಸದರಿ ಕಾಲೇಜಿಗೆ ಸೇರಿದ ಸುಮಾರು 40 ಸೆಂಟ್ಸ್ ನಷ್ಟು ನಿವೇಶನ ಅತಿಕ್ರಮಣವಾಗಿರುತ್ತದೆ.

ಇ) ಅತಿಕ್ರಮಣದ ಬಗ್ಗೆ ಬೆಳ್ತಂಗಡಿ ತಾಲ್ಲೂಕು ತಹಶೀಲ್ದಾರ್‌ರವರಿಗೆ ದಿನಾಂಕ: 17.08.2002ರಂದು ಕಾಲೇಜಿನ ಪ್ರಾಂಶುಪಾಲರ ಮೂಲಕ ಪತ್ರ ಬರೆಯಲಾಗಿದೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳಿಗೂ ಪತ್ರ ಬರೆದು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಆವರಣ ಗೋಡೆ ನಿರ್ಮಿಸಲು ಅಂದಾಜು ಪಟ್ಟಿಯನ್ನು ಕಳುಹಿಸಿಕೊಡುವಂತೆ ಕೋರಿ ಕಾಲೇಜಿನ ಪ್ರಾಂಶುಪಾಲರ ಮೂಲಕ ಲೋಕೋಪಯೋಗಿ ಇಲಾಖೆಗೆ ಪತ್ರ ಬರೆಯಲಾಗಿದೆ.

ಉ)

ವಿಷಯ/ ಪದನಾಮ	ಮಂಜೂರಾದ ಹುದ್ದೆ	ಕಾರ್ಯ ನಿರ್ವಹಿಸುತ್ತಿರುವವರ ಹುದ್ದೆ	ಖಾಲಿ ಹುದ್ದೆ
ಕನ್ನಡ	1	1	–
ಇಂಗ್ಲೀಷ್	1	1	–
ಇತಿಹಾಸ	1	1	–
ಅರ್ಥಶಾಸ್ತ್ರ	1	1	–
ರಾಜ್ಯಶಾಸ್ತ್ರ	1	1	–
ವಾಣಿಜ್ಯಶಾಸ್ತ್ರ	3	3	–
ಅಧೀಕ್ಷಕರು	1	–	1
ಪ್ರ.ದ.ಸ.	1	–	1
ದ್ವಿ.ದ.ಸ.	1	1	–
ಬೆರಳಚ್ಚುಗಾರರು	1	1	–
ಗ್ರಂಥಾಲಯ ಸಹಾಯಕರು	1	–	1
ಅಟೆಂಡರ್	1	1	–
ಪರಿಚಾರಕರು	2	1	1

ಊ) ಶೀಘ್ರ ಕ್ರಮವಹಿಸಲಾಗುತ್ತದೆ.

860 (1032) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?